ಈ) ಹೌದು.

ಅವಶ್ಯವಿರುವ 87 ಹುದ್ದೆಗಳ ಮಂಜೂರಾತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಹೆಚ್ಚುವರಿ ಅವಶ್ಯವಿರುವ ಹಾಗೂ ಅವಶ್ಯವಿರುವ ಹುದ್ದೆಗಳ ಮಂಜೂರಾತಿ ಸಂಬಂಧ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಆರ್ಥಿಕ ಇಲಾಖೆಯ ಅನುಮೋದನೆಯ ನಂತರ ಹುದ್ದೆಗಳನ್ನು ಸೃಜಿಸಲು ಕ್ರಮ ಕೈಗೊಳ್ಳಲಾಗುವುದು.

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆ

218(313); ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ)

ಅ) ತುಮಕೂರು ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೀಸಲಿಟ್ಟ ಹಾಗೂ ಬಿಡುಗಡೆ ಮಾಡಿದ ಅನುದಾನ ಎಷ್ಟು?

ಇ) ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ವಿಳಂಬವಾಗಲು ಕಾರಣಗಳೇನು?

ಈ) ಹಾಗಿದ್ದಲ್ಲಿ, 2014–15ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು)

ಅ)

- ಹೌದು

ಆ) ತುಮಕೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ (ಸಂಸ್ಕೃತಿ ಇಲಾಖೆ) ಸಮಪಾಲಿನ ಅನುದಾನದೊಂದಿಗೆ ` 2.6 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಅದರಂತೆ, ರಾಜ್ಯ ಸರ್ಕಾರದ ಪಾಲಿನ ಅನುದಾನದ ಮೊತ್ತವಾದ ` 1.30 ಕೋಟಿಗಳನ್ನು ತುಮಕೂರು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಆದರೆ, ಕೇಂದ್ರ ಸರ್ಕಾರವು ತನ್ನ ಸಮಪಾಲಿನ ಅನುದಾನದ ಮೊತ್ತವಾದ ` 1.30 ಕೋಟಿಗಳನ್ನು ಬಿಡಗಡೆ ಮಾಡಿರುವುದಿಲ್ಲ.

ಇ) ಈ ಕೇಂದ್ರವನ್ನು ಸ್ಥಾಪಿಸಲು ವಿಳಂಬವಾಗಲು ಮುಖ್ಯ ಕಾರಣವೇನೆಂದರೆ ಕೇಂದ್ರ ಸರ್ಕಾರವು ತುಮಕೂರು ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಅನುಮೋದನೆಯನ್ನು ದಿನಾಂಕ ಡಿಸೆಂಬರ್ 20, 2013ರಲ್ಲಿ ರಾಷ್ಟ್ರೀಯ ವಿಜ್ಞಾನ ವಸ್ತು ಸಂಗ್ರಹಾಲಯ ಪರಿಷತ್, ಕೊಲ್ಕತ್ತ ರವರು ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ. ಆದರೆ, ಕೇಂದ್ರ ಸರ್ಕಾರವು ಉದ್ದೇಶಿತ ಕೇಂದ್ರವನ್ನು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ` 5.00 ಕೋಟಿಗಳ ಬಂಡವಾಳ ವೆಚ್ಚದಲ್ಲಿ ರಾಜ್ಯ ಸರ್ಕಾರವೇ ಸಂಪೂರ್ಣ ಅನುದಾನ ನೀಡಬೇಕೆಂಬ ಷರತ್ತಿನ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಅನುಮೋದಿಸಿರುತ್ತದೆ. ಈ ಯೋಜನೆಗೆ ರಾಷ್ಟ್ರೀಯ ವಿಜ್ಞಾನ ವಸ್ತು

ಸಂಗ್ರಹಾಲಯ ಪರಿಷತ್ ತಾಂತ್ರಿಕ ಮತ್ತು ಪರಿಣಿತ ನೆರವು ಮಾತ್ರ ನೀಡಲಿರುತ್ತದೆ.

ಈ) ರಾಜ್ಯ ಸರ್ಕಾರವು ಉಪಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ತನ್ನ ಸಂಪೂರ್ಣ ಅನುದಾನದೊಂದಿಗೆ ಸ್ಥಾಪಿಸಲು ಪ್ರಸ್ತುತ ಪರಿಗಣಿಸಲಾಗುತ್ತಿದೆ. ಇಲಾಖೆಯು ಪ್ರತಿ ಕೇಂದ್ರ ಸ್ಥಾಪನೆಗೆ ` 3.5 ಕೋಟಿಗಳ ಬಂಡವಾಳು ವೆಚ್ಚವನ್ನು ಅಂದಾಜಿಸಿರುತ್ತದೆ. ಈಗಾಗಲೇ ` 1.3 ಕೋಟಿಗಳನ್ನು ತುಮಕೂರು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿರುವುದರಿಂದ, ಉಳಿದ ಹೆಚ್ಚುವರಿ ಹಣಕಾಸು ನೆರವನ್ನು ರಾಜ್ಯ ಸರ್ಕಾರವು 2014–15ರ ಆರ್ಥಿಕ ವರ್ಷದಲ್ಲಿ ನೀಡಿ, ತುಮಕೂರು ಉಪಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗುವುದು.

ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು

219(314); ಶ್ರೀ ಸುಧಾಕರ್ ಲಾಲ್ ಪಿ.ಆರ್. (ಕೊರಟಗೆರೆ)

ಅ) 2014ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಮಕ್ಕಳ ದಾಖಲಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಸರ್ಕಾರ ಆದೇಶ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಸ್ಥಗಿತಗೊಳಿಸಲು ಕಾರಣಗಳೇನು; (ವಿವರಗಳನ್ನು ನೀಡುವುದು);

ಇ) ರಾಜ್ಯದಲ್ಲಿರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ ಎಷ್ಟು; ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಹಾಗೂ ಹೊಂದದೇ ಇರುವ ವಸತಿ ಶಾಲೆಗಳ ಪೂರ್ಣ ವಿವರಗಳನ್ನು ಶಾಲೆ, ತಾಲ್ಲೂಕು ಹಾಗೂ ಜಿಲ್ಲಾವಾರು ನೀಡುವುದು;

ಈ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಹೊಂದದೇ ಇರುವ ಶಾಲೆಗಳಲ್ಲಿ ಈ ವರ್ಷ ಮಕ್ಕಳ ದಾಖಲಾತಿ ಪ್ರಕ್ರಿಯೆ